# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **876** |
| ಮಾನ್ಯ ಸದಸ್ಯರ ಹೆಸರು | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 23.02.2024 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಬೀದರ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಮಕ್ಕಳ ಆಹಾರ ಧಾನ್ಯ ಮತ್ತು ಇನ್ನಿತರ ಸಾಮಾಗ್ರಿಗಳ ಟೆಂಡರ್‌ನಲ್ಲಿ ಅಧಿಕಾರಿ/ಗುತ್ತಿಗೆದಾರರು ಅವ್ಯವಹಾರದಲ್ಲಿ ತೊಡಗಿರುವುದು ನಿಜವೇ? (ಸಂಪೂರ್ಣಮಾಹಿತಿನೀಡುವುದು) | ಹೌದು<br>2020-21ನೇ ಸಾಲಿನಲ್ಲಿ ಬೀದರ್ ತಾಲ್ಲೂಕಿನ ಆಹಾರ ಸಾಮಗ್ರಿ ಸರಬರಾಜಿಗೆ ಸಂಬಂಧಿಸಿದಂತೆ ಆಹಾರ ಸಾಮಗ್ರಿ ಸರಬರಾಜುದಾರರಾದ ಮೆ:ಬಸವೇಶ್ವರ ಎಂಟರ್‌ಪ್ರೈಸರ್ಸ್ ಇವರು ನಿಗಧಿಪಡಿಸಿದ ದರಗಳಿಗಿಂತ ಹೆಚ್ಚು ದರ ನಮೂದಿಸಿ ರೂ.13,81,383/- ಗಳ ಬಿಲ್ಲು ನೀಡಿದ್ದು, ಸದರಿ ಬಿಲ್ಲುಗಳನ್ನು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೀದರ್ ಇವರು ಪಾವತಿ ಮಾಡಿರುತ್ತಾರೆ. ಈ ಬಗ್ಗೆ ಪರಿಶೀಲನೆ ನಡೆಸಿ ರೂ.13,81,383/- ಗಳ ಬಿಲ್ಲು ಹೆಚ್ಚುವರಿಯಾಗಿ ಪಾವತಿಸಿರುವುದು ದೃಡಪಟ್ಟಿರುವುದರಿಂದ, ಸದರಿ ಮೊತ್ತವನ್ನು ಸಂಸ್ಥೆಯಿಂದ ವಸೂಲಿ ಮಾಡಲು ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರು ಆದೇಶಿಸಿರುತ್ತಾರೆ. |
| ಆ) | ಹಾಗಿದ್ದಲ್ಲಿ ಇಂತಹ ಪ್ರಕರಣದಲ್ಲಿ ಭಾಗಿಯಾಗಿದ್ದಅಧಿಕಾರಿ/ಸಿಬ್ಬಂದಿ/ಗುತ್ತಿಗೆದಾರರು/ಏಜೆನ್ಸಿಯವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣಮಾಹಿತಿಒದಗಿಸುವುದು) | 1. ಜಿಲ್ಲಾ ಮಟ್ಟದಲ್ಲಿಆಹಾರ ಸಾಮಗ್ರಿಗಳ ಟೆಂಡರ್ ಅನುಮೋದಿಸುವ ಪ್ರಾಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆಇವರಿಂದ 2020-21ನೇ ಸಾಲಿನಲ್ಲಿ ಬೀದರ್ ತಾಲ್ಲೂಕಿನ ಆಹಾರ ಸಾಮಗ್ರಿಗಳ ಸರಬರಾಜು ಏಜೆನ್ಸಿಯಾದ ಮೆ: ಬಸವೇಶ್ವರ ಎಂಟರ್ ಪ್ರೈಸಸ್, ಬೀದರ್ ಈ ಏಜೆನ್ಸಿಯನ್ನು ಕಪ್ಪು ಪಟ್ಟಿಗೆ ಸೇರಿಸಲು ಅಗತ್ಯ ಕ್ರಮವಹಿಸಲು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೀದರ್ ಜಿಲ್ಲೆಇವರಿಗೆ ದಿನಾಂಕ: 02.02.2024 ರ ಪತ್ರದಲ್ಲಿ ಸೂಚನೆ ನೀಡಲಾಗಿದೆ. |

| | | |
|---|---|---|
| | | 2. ಹೆಚ್ಚುವರಿ ಬಾಬ್ತು ಪಾವತಿಗೆ ಕಾರಣರಾಗಿರುವ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ಬೀದರ್ ತಾಲ್ಲೂಕು, ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ, ಬೀದರ್ ತಾಲ್ಲೂಕು ಹಾಗೂ ಸಂಬಂಧಪಟ್ಟ ವಿದ್ಯಾರ್ಥಿ ನಿಲಯಗಳ ನಿಲಯ ಮೇಲ್ವಿಚಾರಕರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸದರಿಯವರ ವಿವರಗಳನ್ನು ಕಳುಹಿಸಲು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೀದರ್ ಜಿಲ್ಲೆ ಇವರಿಂದ ಪಡೆಯಲಾಗಿದ್ದು, ಸದರಿಯವರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಕ್ರಮವಹಿಸಲಾಗಿದೆ. |
| ಇ) | ಸದರಿ ಪ್ರಕರಣದಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಎಷ್ಟು ಮೊತ್ತದ ಹಣ ದುರುಪಯೋಗವಾಗಿದೆ? (ಮಾಹಿತಿಒದಗಿಸುವುದು) | ಹೌದು.<br>ಸದರಿ ಪ್ರಕರಣದಲ್ಲಿ ರೂ.13.81ಲಕ್ಷಗಳನ್ನು ಸದರಿ ಗುತ್ತಿಗೆದಾರರಿಗೆ ಹೆಚ್ಚುವರಿ ಪಾವತಿ ಆಗಿರುತ್ತದೆ. |
| ಈ | ಸದರಿ ಪ್ರಕರಣದಲ್ಲಿ ಸಂಬಂಧಿಸಿದ ಗುತ್ತಿಗೆದಾರರ ವಿರುದ್ಧ ಆರೋಪ ಸಾಬೀತಾಗಿದ್ದಲ್ಲಿ ಏಜೆನ್ಸಿ/ಗುತ್ತಿಗೆದಾರರ ಲೈಸನ್ಸನ್ನು ಕಪ್ಪು ಪಟ್ಟಿಗೆ ಸೇರಿಸದಿರಲು ಹಾಗೂ ಲೈಸನ್ಸ್ ರದ್ದು ಮಾಡದಿರಲು ಕಾರಣವೇನು? (ಮಾಹಿತಿ ಒದಗಿಸುವುದು) | ಜಿಲ್ಲಾ ಮಟ್ಟದಲ್ಲಿ ಆಹಾರ ಸಾಮಗ್ರಿಗಳ ಟೆಂಡರ್ ಅನುಮೋದಿಸುವ ಪ್ರಾಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರಿಂದ 2020-21ನೇ ಸಾಲಿನಲ್ಲಿ ಬೀದರ್ ತಾಲ್ಲೂಕಿನ ಆಹಾರ ಸಾಮಗ್ರಿಗಳ ಸರಬರಾಜು ಏಜೆನ್ಸಿಯಾದ ಮೆ: ಬಸವೇಶ್ವರ ಎಂಟರ್ ಪ್ರೈಸಸ್, ಬೀದರ್ ಈ ಏಜೆನ್ಸಿಯನ್ನು ಕಪ್ಪು ಪಟ್ಟಿಗೆ ಸೇರಿಸಲು ಅಗತ್ಯ ಕ್ರಮ ವಹಿಸಲು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೀದರ್ ಜಿಲ್ಲೆ ಇವರಿಗೆ ದಿನಾಂಕ:02.02.2024ರ ಪತ್ರದಲ್ಲಿ ಸೂಚನೆ ನೀಡಲಾಗಿದೆ. |

**ಸಂಖ್ಯೆ: ಹಿಂವಕ 185 ಬಿಎಂಎಸ್ 2024**

**(ಶಿವರಾಜ್ ಎಸ್ ತಂಗಡಗಿ )**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು